ನದಿಯನ್ನು ಕಂಡ, ಹಾಗೆ ಕರೆದ. ನದಿಯ ತಿಳಿನೀರಿನ ಹಾಗೆ ನಿಷ್ಕಲ್ಮಶ ವಾತಾವರಣದಲ್ಲಿ ನನ್ನನ್ನು ಬೆಳೆಸಿದ. ಆತ ನನ್ನಂತೆ ಕಥೆಗಳನ್ನು ಬರೆಯಲಿಲ್ಲ ನಿಜ. ಯಾಕೆ? ಕೇಳಿದರೆ ಜೋರಾಗಿ ನಗುತ್ತಿದ್ದ. ಹಾಗಲ್ಲ ಮಗೂ, ಪ್ರತಿಯೊಬ್ಬರೂ ಹುಟ್ಟುತ್ತಲೇ ಕವಿ – ಕಲಾವಿದರಾಗಿರ್‍ತಾರೆ. ಹಾಡುಗಳನ್ನು ತಮ್ಮೊಂದಿಗೆ ತಂದಿರುತ್ತಾರೆ. ಕೆಲವರು ಹಾಡುತ್ತಾರೆ, ಕೆಲವರು ಕೇಳುತ್ತಾರೆ. ಹಲವರು ಬರೆದರೆ ಇನ್ನೂ ಕೆಲವರು ಓದುತ್ತಾರೆ. ಇನ್ನೂ ಕೆಲವರು ಅಂಥವರನ್ನು ಸೃಷ್ಟಿಸುತ್ತಾರೆ! ನನ್ನ ಹಾಗೆ! ಎಂದು ಬಿಡುತ್ತಿದ್ದ. ಎಷ್ಟು ಅಹಂಕಾರಿ ಅನ್ನಿಸುತ್ತದಲ್ಲವೆ? ನನಗೂ ಹಾಗೆ ಅನ್ನಿಸುತ್ತಿತ್ತು. ಆದರೆ ಹತ್ತಿರದಿಂದ ಅವನನ್ನು ಬಲ್ಲರೆ ಅದು ಅತಿಶಯೋಕ್ತಿಯಲ್ಲ ಎಂಬುದು ಗೊತ್ತಾಗುತ್ತಿತ್ತು. ಅವನು ಮಾತನಾಡಿದರೆ ಅದಕ್ಕೆ ಕಥೆಯ ನವುರು, ಬಣ್ಣ ತುಂಬಿರುತ್ತಿತ್ತು. ಆತ ಗುನುಗಿದರೆ ಅದು ಹಾಡಾಗುತ್ತಿತ್ತು. ಮಕ್ಕಳೆಲ್ಲ ಗದ್ದಲ ಮಾಡುವಾಗ ಆತ ಅವನ್ನೆಲ್ಲ ಕರೆದು ಕೂರಿಸಿ ಕಥೆ ಹೇಳಿದರೆ – ಅಲ್ಲಿ ಕವಿತೆಯಿರುತ್ತಿತ್ತು. ಆತನ ಚಿಕ್ಕ ಮನೆಯ ಹೆಸರು– ಮೂಡಣ. ತೋಟದ ಹೆಸರು– ಸಿಗುರು. ಆತ ಸಾಕಿದ ಆಕಳ ಕರುಗಳ ಹೆಸರು ವಿಶಾಖಿ, ರೋಹಿಣಿ, ಫಲ್ಗುಣಿ. ಅವನು ಬೆತ್ತ ಸೀಳಿದರೆ, ಮುರಿದ ಬಾಗಿಲಿಗೆ ಫಳಿ ಹೊಡೆದರೆ ಅಲ್ಲಿ ಶಿಲೆಯ ನಯಗಾರಿಕೆ. ಆತ ಕೊಬ್ಬರಿ ತುರಿದರೆ ಮಲ್ಲಿಗೆಯ ಹೂರಾಶಿ. ತರಕಾರಿ ಹೆಚ್ಚಿದರೆ ಆ ಹೋಳುಗಳಲ್ಲಿ ನಕ್ಷತ್ರಗಳು. ಉಪ್ಪಿನಕಾಯಿಗಾಗಿ ಆತ ತೋಟದ ಸಮಗಾತ್ರದ ಮಾವಿನ ಕಾಯಿಗಳನ್ನು ಆಯ್ದು ಹೆಚ್ಚಲು ಕೂರುವ ಮೊದಲೇ ನಮ್ಮ ಬಾಯೆಲ್ಲ ನೀರೂರುತ್ತಿತ್ತು. ಬದುಕನ್ನು ಹಾಗೆ ನೋಡುವುದು; ಹಾಗೆ ಬದುಕುವುದು ನನಗಾತ ಕಲಿಸಿದ. ಸಹನೆ, ತನ್ಮಯತೆ – ಆತನ ಧ್ಯಾನ; ನಿರಾಂತಕ. ಅನ್ಯಾಯವಾಗದ ಮಾತು – ಆತನ ಮಂತ್ರ. ಒಂದು ದಿನವೂ ದೇವರ ನಿರ್ಜೀವಪಟಗಳಿಗೆ ಅವ ಕೈಮುಗಿಯಲಿಲ್ಲ – ಆದರೆ ಹಿರಿಯ ಜೀವಿಗಳಿಗೆ ನಮಸ್ಕರಿಸಿದ.

ನಮ್ಮ ಹೆಂಚು ಮನೆಯ ಉಪ್ಪರಿಗೆಯೇರಿ ನಿಂತು ಗಾಢ ಕತ್ತಲೆಯ ಆಗಸ–ನಕ್ಷತ್ರಗಳನ್ನು ಅಪ್ಪ ನನಗೆ ತೋರಿಸಿದರೆ ಅದು ಅಮಾವಾಸ್ಯೆ. ಇಂಚಿಂಚು ಅರಳುತ್ತ ಗೋಲವಾಗುವ ಚಂದಿರನನ್ನು; ಬೆರಳು ಮಾಡಿ ರೋಹಿಣಿ ನಕ್ಷತ್ರವನ್ನು ತೋರಿದರೆ ಅದು ಶುಕ್ಲ ಪಕ್ಷ. ಮನದಲ್ಲಿ ಆಗೆಲ್ಲ ಉಕ್ಕೇರುವ ಉತ್ಸಾಹ–ಕಾತರ. ಅದೇ ಉಪ್ಪರಿಗೆಯಲ್ಲಿ ನಿಂತು ದೂರಕ್ಕೆ ಕಣ್ಣು ಹಾಯಿಸಿದರೆ ಕಾಣುತ್ತಾಳೆ. ಭೂಮಿಗೆ ಬೆಳ್ಳನೆಯ ಗೆರೆಕೊರೆದಂತೆ ನನ್ನ ಹೆಸರಿನ ನದಿ ಸುನಯನ. ಕಿವಿಗಳನ್ನು ಅಪ್ಪನಷ್ಟು ಚುರುಕು ಮಾಡಿಕೊಂಡರೆ ಆಕೆ ನಡೆದಾಡುವ ಜುಳುಜುಳು ಸಪ್ಪಳ ಕೇಳುತ್ತದೆ.

ಆ ನದಿಯ ನೀರಿನ ನಾದ, ದೀಪಾವಳಿಯ ಬಲೀಂದ್ರ ಶುಕ್ಲಪಕ್ಷದ ಚಂದ್ರಾಮ ಕೃಷ್ಣ ಪಕ್ಷದ ನಕ್ಷತ್ರ ನೀಹಾರಿಕೆ, ಅಪ್ಪ ತಲೆಗೆ ಪಂಚೆಕಟ್ಟಿ ಸೀಳುವ ಸೌದೆ, ಹಿತ್ತಲಲ್ಲಿ ಫಲ್ಗುಣಿಯ ಅಂಬಾ ಕೂಗು ಇದರೊಂದಿಗೆ ಹೊಲದ ತೆನೆಗಳ ನಡುವೆ ನಡೆದಾಡುತ್ತ ನಾನು, ಬಚ್ಚಲಲ್ಲಿ ಬಳೆಗಳ ಸದ್ದು ಮಾಡುತ್ತ ಪಾತ್ರೆ ತೊಳೆವ ಅಮ್ಮ... ಹೀಗೆ ದಿನಗಳು ಕಳೆದವು. ಅಪ್ಪ ಮುದುಕನಾದ. ನಾನು ಚಿಕ್ಕವಳಿರುವಾಗ ಮುದುಕನಾದರೆ ಹೇಗಿರುತ್ತಾನೀ ಅಪ್ಪ? ಊಹಿಸುವುದಕ್ಕಿಂತ ಈಗಾತ ಚಿಕ್ಕವನಾಗಿ ಕಂಡ. ವೃದ್ಧಾಪ್ಯದ ತರುಣನೆಂಬಂತೆ!

ಒಂದು ಚೈತ್ರದ ಯುಗಾದಿಯಂದು ನನಗಾತ ವೀಣೆ ತಂದುಕೊಟ್ಟ. ಅದಕ್ಕೆ 'ಸ್ವರ' ಎಂದು ಆತನೇ ಹೆಸರು ಕೊಟ್ಟ. ಅದಾಗ ಮೈನೆರೆದ ನಾನು ರೇಶಿಮೆ ಲಂಗ, ಕಪ್ಪು ಕುಪ್ಪುಸ, ಕಿವಿಗೆ ಹಾಕಿದ ಓಲೆ ಝುಮಕಿಯಲ್ಲಿ 'ಸ್ವರ'ವನ್ನು ಬಿಗಿದಪ್ಪಿದೆ. ನನಗೂ– ಅಪ್ಪನಿಗೂ, 'ಸ್ವರ' ವೀಣೆಗೂ ಎಂಥ ಭಾವನಾತ್ಮಕ ಸಂಬಂಧ! ನಾನು ಅಪ್ಪನ ಮುಂದೆ ಕುಳಿತಿರುತ್ತಿದ್ದೆ, ಇಲ್ಲ ಉಪ್ಪರಿಗೆಯಲ್ಲಿಟ್ಟ 'ಸ್ವರ'ವನ್ನಪ್ಪಿ ಭಾವಪರವಶಳಾಗಿ ವೀಣೆ ನುಡಿಸುತ್ತಿದ್ದೆ. ಸಾಕು ಮಗೂ, ಇನ್ನೂ ಬಾ ಎಂದು ಅಪ್ಪ